ಬಂದಾಗ ನೀವು ನಮ್ಮ ಮನಿಗೆ ಬರಲಿಕ್ಕೇಬೇಕು ನೋಡ್ರಿ.'

ಮುದುಕ ತಿರುತಿರುಗಿ ತನ್ನ ಹಳೆಯ ಜಾಡಿಗೇ ಬರುತ್ತಿದ್ದ. ಜೊತೆಗೆ ಅವನ ಮಾತುಗಳು ದೇಶಾವರಿಯ ಮುಂದಿನ ಹಂತಕ್ಕೆ ಬಂದಿದ್ದುವು. ಈಗವನು ಹೊಗಳಿಕೆಯಲ್ಲಿ ಉತ್ಪ್ರೇಕ್ಷೆಯ ಕೂಡ ಸುಳ್ಳನ್ನೂ ಸೇರಿಸತೊಡಗಿದ್ದ. ಯಾಕಂದರೆ ಇಲ್ಲಿಯವರೆಗೆ ನಾನು ಕಾದಂಬರಿಗಳನ್ನೇ ಬರೆದಿರಲಿಲ್ಲ. ಕೆಲವರು ಕಾದಂಬರಿ ಎಂದು ತಪ್ಪು ತಿಳಿದುಕೊಳ್ಳಬಹುದಾದ ಒಂದು ನೀಳ್ಗತೆ ಪ್ರಕಟವಾದದ್ದು ಕೂಡ ಮೊನ್ನೆ– ಮೊನ್ನೆ. ಇನ್ನು ಉಳಿದ ಪುಸ್ತಕಗಳಂತೂ 'ಬಾಳ ಬೇಡಿಕೆ' ಇರುವಂಥದೇ ಅಲ್ಲ. ಮುದುಕನ ದೇಶಾವರಿತನ ಪಕ್ಕಾ ಆದಂತೆ ಆತನ ಉದ್ದೇಶದ ಬಗ್ಗೆ ಸಂಶಯ ಬಲವಾಯಿತು. ಮುದುಕನಿಂದ ಆದಷ್ಟು ಬೇಗ ತಪ್ಪಿಸಿಕೊಳ್ಳಬೇಕೆನಿಸಿತು. ಕೌಂಟರಿನ ಕಾರಕೂನನಾದರೂ ಬೇಗ ಬರಬಾರದೆ–ಎಂದುಕೊಂಡೆ. ಅವನಿನ್ನೂ ಬರುವ ಲಕ್ಷಣ ಕಾಣಲಿಲ್ಲ. ಅನಿವಾರ್ಯವಾಗಿ ಆ ಮುದುಕನ ಮುಂದೆ ಕುಳಿತಿರಬೇಕಾಯಿತು.

ಮುದುಕ ಮಾತಾಡುತ್ತಲೇ ಇದ್ದ. ನಡು ನಡುವೆ ಹೊಗಳಿಕೆಯ ಮಾತುಗಳನ್ನು ಸೇರಿಸುತ್ತಲೇ ಇದ್ದ. ನನಗೆ ಆತನ ಮಾತುಗಳ ಕಡೆ ಲಕ್ಷ್ಯವಿಲ್ಲವೆಂದು ತೋರಿಸಲು ಆಗಾಗ ವಿನಾಕಾರಣ ಅತ್ತಿತ್ತ ನೋಡಿದೆ. ನಡುನಡುವೆ ಎದ್ದು ಹೋಗಿ ಕೌಂಟರನ್ನು ನೋಡಿ ಬಂದೆ. ಅವನು ಉತ್ಸಾಹದಿಂದ ಮಾತಾಡುತ್ತಿದ್ದಾಗಲೇ ನನ್ನ ಮಗಳಿಗೆ ಅದು–ಇದು ಹೇಳಿದೆ. ಹೀಗೆ ಅವನ ಮಾತುಗಳಲ್ಲಿ ನನಗೆ ಆಸಕ್ತಿ ಇಲ್ಲವೆಂದು ತರತರದಿಂದ ತೋರಿಸಿಕೊಂಡೆ. ಆದರೂ ಅವನ ಉತ್ಸಾಹವೇನೂ ಕಡಿಮೆಯಾಗಲಿಲ್ಲ. ಉಪಾಯ ಇಲ್ಲದೆ ಮತ್ತೆ ಮಾತು ಬದಲಿಸಲು ಯತ್ನಿಸಿದೆ. ಬೆಂಗಳೂರಿಗೆ ಬಂದ ಕಾರಣವೇನೆಂದು ವಿಚಾರಿಸಿದೆ.

'ನೋಡ್ರಿ ಸಾಹೇಬರ... ಈ ಸರಕಾರೀ ಆಫೀಸು ಅಂದರ ಬಾಳ ಕೆಟ್ಟ. ನೋಡ್ರಿ... ರಿಟಾಯರ್ ಆಗಿ ಒಂಬತ್ತು ವರ್ಷ ಆತು. ಇನ್ನೂ ಪೆನ್ಷನ್ ಬರವಲ್ದು. ಊರೊಳಗ ಕೂತು ಕಾಗದದ ಮ್ಯಾಲ ಕಾಗದಾ ಬರದೆ. ಏನಾಗೈತಿ ಅಂತ ಕೂಡ ತಿಳಿಸಲಿಲ್ಲ. ಸಾಕಾಗಿ ಸ್ವತಾ ಬಂದು ನೋಡಿಕೊಂಡರ ಹೋಗೂನು ಅಂತ ಬಂದೆ. ಒಬ್ಬರೂ ಜವಾಬ್ದಾರೀ ತಗೋವಲ್ಲರು. ಒಬ್ಬರ ಮ್ಯಾಲ ಒಬ್ಬರು ಹಾಕಿಬಿಡತಾರ. ಆ ಕಾಗದ ಇಲ್ಲ. ಈ ಕಾಗದ ಇಲ್ಲ ಅಂತ ಹೆದರಿಸಿ ಬಿಡತಾರ. ಎಲ್ಲಾ ನಂದs ತಪ್ಪು ಅನ್ನೂ ಹಂಗ ಮಾತನಾಡತಾರ. ಬಂದಾಗ ಬರ್ಲಿ ಅಂತ ಸುಮ್ಮನಾದೆ. ಇನ್ನೇನು ಮಾಡೂದ್ರಿ ಸಾಹೇಬರ...? ಮುಪ್ಪಿನ ವಯಸ್ಸಿನಾಗ ಈ ಪರಿಸ್ಥಿತಿ ಯಾರಿಗೂ ಬರಬಾರ್ದು ನೋಡ್ರಿ...'

ನನ್ನ ಸಂಶಯ ಇನ್ನೂ ಬಲವಾಯಿತು. ಈ ದೇಶಾವರಿ ತನ್ನ ಅನಿವಾರ್ಯವಾದ ಗುರಿ ತಲುಪುವುದರಲ್ಲಿ ಸಂಶಯವಿಲ್ಲ ಎನಿಸಿತು. ಮುದುಕ ಹೇಳಿದ್ದು ನಿಜವಾಗಿದ್ದರೆ ಅದು ಖಂಡಿತವಾಗಿಯೂ ತೊಂದರೆಯ ಸ್ಥಿತಿಯೇ ಹೌದು. ಆದರೆ ದೇಶಾವರಿಯಲ್ಲಿ ಯಾವುದು ನಿಜ, ಯಾವುದು ಸುಳ್ಳು? ಈ ವಿಷಯವನ್ನೇ ಎತ್ತಬಾರದಾಗಿತ್ತೇನೋ! ಆದರೆ ಗೋರಿಯನ್ನು ತೋಡಿಕೊಳ್ಳಲು ಆರಂಭಿಸಿಯಾಗಿತ್ತು.

'ಯಾಕ, ನಿಮಗ ವಯಸ್ಸಿಗೆ ಬಂದ ಗಂಡು ಮಕ್ಕಳು ಯಾರೂ ಇಲ್ಲೇನು?' ಎಂದೆ.

'ಇದ್ದಾರ್ರಿ ಸಾಹೇಬರ, ಇಬ್ಬರದಾರ. ಒಬ್ಬಾವ ತಹಸೀಲ್ದಾರ್ ಕಚೇರ್ಯಾಗ ಕಾರಕೂನ ಆಗ್ಯಾನ. ಇನ್ನೊಬ್ಬಾವ ಹೈಸ್ಕೂಲಿನಾಗ ಮಾಸ್ತರಾಗ್ಯಾನ. ಬೆಳೆದ ಮಕ್ಕಳು ತಮ್ಮ–ತಮ್ಮ ಸಂಸಾರ ತೂಗಿಸಿಕೊಂಡು ಹೋಗೂದs ಕಷ್ಟ ಅವರಿಗೆ. ಮ್ಯಾಲ ಈಗಿನ ಕಾಲದ ಮಕ್ಕಳು. ಅವರ್ನ ನೆಚಿಗೊಂಡು ಇರಾಕಾದೀತೇನ್ರಿ? ಇದಿಷ್ಟು ಪೆನ್ಷನ್ ಬರಾಕ ಹತ್ತದರ ಸಾಯೂತನಕಾ ನಂದೂ ನನ್ನ ಹೇಣ್ತೇದೂ ಹೇಗೋ ನಡೀತಿತ್ತು. ಸ್ವತಂತ್ರ ಆಗಿ ಇರಬೇಕು ಅಂದ್ರ ಯಾಕೋ